ದಿನಾಂಕ : 13–07–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಂದುವರೆದ ಪಾಟೀ ಸವಾಲು – ಶ್ರೀ. ಆರ್ ಕೆ ವಕೀಲರಿಂದ ವಾದಿ ಪರ

ನಿಪಿ–1 ರ ಪುಟ ಸಂಖ್ಯೆ 2 ರ ಮೊದಲ ಪ್ಯಾರದಲ್ಲಿ ಹೇಳಿರುವ ಅಂಶಗಳು 1 ನೇ ಪ್ರತಿವಾದಿಗೆ ಸಂಬಂದಪಟ್ಟದ್ದಾಗಿರುತ್ತದೆ. ನಿಪಿ–1 ರಲ್ಲಿ 1 ನೇ ಪಾರ್ಟಿ ಸುಬ್ರಹ್ಮಣ್ಯ ಜೊಯಿಷ್ ಯಾನೆ ಅಣ್ಣಪ್ಪ ಎಂದು ಕಾಣಿಸಲಾಗಿದ್ದು, ಅವರು ನಮ್ಮ ತಂದೆಯಾಗಿರುತ್ತಾರೆ. ನಿಪಿ–1

ರಲ್ಲಿ ನಮ್ಮ ತಂದೆಗೆ ಸದರಿ ಆಸ್ತಿಯು ಹಕ್ಕುಪತ್ರದ ಮೂಲಕ ಬಂದಿರುತ್ತದೆ ಎಂದು ಬರೆಯಲಾಗಿದೆ, ಅವರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ನನ್ನ ತಂದೆಗೆ ಹಕ್ಕುಪತ್ರದ ಮೂಲಕ ಬಂದಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ–3 ಯಾವ ದಿನಾಂಕದಂದು ಆಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ–3 ರಲ್ಲಿ 2 ನೇ ಪಾರ್ಟಿಯವರ ಸಹಿ ಇರುವುದಿಲ್ಲ ಎಂದರೆ ಸರಿ. ನಿಡಿ–3 ಆಗುವ ಸಮಯದಲ್ಲಿ ನಾನು ಇರಲಿಲ್ಲ. ಆದ ಕಾರಣ ಅದರಲ್ಲಿರುವ ಸಹಿ ಯನ್ನು ನನಗೆ ಗುರುತಿಸಲು ಆಗುವುದಿಲ್ಲ. ಯಾವುದೇ ಒಪ್ಪಿಗೆ ಪತ್ರ ಆಗಿರುವುದಿಲ್ಲ ಮತ್ತು ನಿಡಿ–3 ಅನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಹಂಚಿನ ಮನೆ ಇತ್ತು ಎಂದರೆ ಸರಿ. ಕರಾರು ಸುಬ್ರಹ್ಮಣ್ಯ ಜೊಯಿಷ್ ಮತ್ತು ನನ್ನ ತಂದೆಯವರ ನಡುವೆ ಆಗಿರುತ್ತದೆ. ಕರಾರು 2005 ರಲ್ಲಿ ಆಗಿರುತ್ತದೆ. ಆದರೆ ನನಗೆ ನಿಖರವಾದ ದಿನಾಂಕ ಗೊತ್ತಿರುವುದಿಲ್ಲ. ಕರಾರು ಆಗಿದೆ ಎಂದು ಹೇಳಿದ ಸಮಯದಲ್ಲಿ ನಾನು ಇರಲಿಲ್ಲ. ನಾನು ಹೇಳಿದಂತೆ ಯಾವುದೇ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ–4 ರ ಕಟ್ಟಡ ಕಾಮಗಾರಿ ಕರಾರು ಪತ್ರದ ಮೇಲೆ ಸ್ಟ್ಯಾಂಪ್ ಡ್ಯೂಟಿ ಪಾವತಿ ಮಾಡಿರುವುದಿಲ್ಲ ಎಂದರೆ ಸರಿ. ಈ ದಾವಾ ಹೂಡಿದ ಮೇಲೆ ನಿಡಿ–4 ಅನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ–5 ರಿಂದ ನಿಡಿ–26 ದಾಖಲೆಗಳು ನಿಪಿ–1 ರ ದಾಖಲಾತಿ ಆದಾರದ ಮೇಲೆ ಆಗಿರುವ ದಾಖಲಾತಿಗಳು ಎಂದರೆ ಸರಿ.

ಲಿಖಿತ ಹೇಳಿಕೆಯಲ್ಲಿರುವ 2 ನೇ ಪ್ರತಿವಾದಿಯ ಸಹಿ ನನ್ನ ತಂದೆಯ ಸಹಿ ಆಗಿರುತ್ತದೆ. ನಿಪಿ-1 ರಲ್ಲಿರುವ ಪೋಟೋ ನನ್ನ ತಂದೆಯದಾಗಿದ್ದು ಅದರ ಪಕ್ಕದಲ್ಲಿರುವ ಸಹಿ ಕೂಡ ನನ್ನ ತಂದೆಯದ್ದಾಗಿರುತ್ತದೆ. ನಿಪಿ-1 ರಲ್ಲಿರುವ ನನ್ನ ತಂದೆಯ ಸಹಿ ಎಂದು ಹೇಳುವ ಸಹಿ ಮತ್ತು ಲಿಖಿತ ಹೇಳಿಕೆಯಲ್ಲಿರುವ ಸಹಿಗಳು ಬೇರೆ ಬೇರೆ ಇರುತ್ತದೆ ಎಂದರೆ ಸಾಕ್ಷಿ ನನ್ನ ತಂದೆ ಎರಡೂ ರೀತಿಯಲ್ಲಿ ಸಹಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿರುವಂತಹ ನನ್ನ ತಂದೆಯ ಸಹಿ ಬೇರೆ ಯಾವ ದಾಖಲಾತಿಗಳಲ್ಲಿ ಇರಬಹುದು ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು ವಾದಿ ಮತ್ತು 1 ನೇ ಪ್ರತಿವಾದಿಗೆ ಸಂಬಂದಪಟ್ಟದ್ದು ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿ ವಾದಿ,1 ನೇ ಪ್ರತಿವಾದಿ ಅಥವಾ ಬೇರೆ ಯಾರಿಂದಲೂ ಕಾನೂನುಬದ್ದವಾಗಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮಲ್ಲಿ ಯಾವುದೇ ರೀತಿಯ ನೋಂದಾಯಿತ ಪತ್ರ ಕೂಡ ಇರುವುದಿಲ್ಲ ಎಂದರೆ ಸಾಕ್ಷಿ ನನ್ನಲ್ಲಿ ಅದಲು ಬದಲು ಪತ್ರ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಪತ್ರವನ್ನು ನಾನು ನಮ್ಮ ವಕೀಲರಿಗೆ ನೀಡಿರುತ್ತೇನೆ. ನಾನು, ನನ್ನ ತಂದೆ-ತಾಯಿ ಮತ್ತು ನನ್ನ ಸಹೋದರರು ಸೇರಿಕೊಂಡು ನಿಪಿ-1 ಅನ್ನು ಸೃಷ್ಟಿ ಮಾಡಿಕೊಂಡಿರುತ್ತೆವೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಸ್ವಾಧೀನಬ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸಾಗರ